ಅರ್ಥೈಸುವರು. ಹಲವರು ಗೊಲ್ಲೇರಿ ಗ್ರಾಮ ನೀರಾಗುವುದ ತಪ್ಪಿಸಲು, ಗಂಗಮ್ಮ ತಾನೇ ದಾರಿ ಬದಲಿಸಿರುವಳು ಎಂದರೆ, ಮತ್ತೆ ಕೆಲವರು ಗ್ರಾಮ ದಿಬ್ಬದಲ್ಲಿದೆ; ದಿಬ್ಬ ಹತ್ತಲಾಗದ ಹಳ್ಳ ತಿರುವು ಪಡೆದಿದೆ; ಅದು ಪ್ರಕೃತಿ ನಿಯಮವೆಂದು, ಗ್ರಾಮ ನಿರ್ಮಿಸಿದವರ ನೈಪುಣ್ಯತೆಗೆ ಸಾಕ್ಷಿ ಎಂದು ಹಾಡಿ ಹೊಗಳುವರು.

ಗೊಲ್ಲೇರಿಯಿಂದ ಅನತಿದೂರದಲ್ಲಿ ಮರಿಬೆಟ್ಟವಿದ್ದು ಅದರ ಬಳಿ ಮಾರಿಹಳ್ಳ ಎರಡಾಗುತ್ತದೆ. ಮರಿಬೆಟ್ಟವನ್ನು ದ್ವೀಪವಾಗಿಸಿ ಎಡಕ್ಕೆ ಹರಿಯುವುದ ದೊಡ್ಡಮಾರಿಯೆಂದೂ, ಬಲಕ್ಕೆ ಹರಿಯುವುದ ಚಿಕ್ಕಮಾರಿಯೆಂದು ಕರೆಯುವರು. ಮರಿಬೆಟ್ಟದ ಎಡ ಬಲಕ್ಕೆ ತಲಾ ಒಂದು ಸೀಳಳ್ಳ ಹುಟ್ಟಿ ಮುಖ್ಯ ಹಳ್ಳ ಸೇರುತ್ತವೆ. ಸೀಳಳ್ಳ ಮುಖ್ಯ ಹಳ್ಳ ಸೇರುವ ದೃಶ್ಯ, ಸಂತೆಗೆ ಹೊರಟ ಅಮ್ಮನ ಹಿಂದೆ ರಚ್ಚೆ ಹಿಡಿದು ಹಿಂಬಾಲಿಸುವ ಚಿಕ್ಕ ಮಕ್ಕಳಂತೆ ಕಾಣುತ್ತದೆ. ಮರಿಬೆಟ್ಟದ ತಪ್ಪಲಿಂದ ಎರಡೂ ಹಳ್ಳಗಳು ಹರೆಯ ಉಕ್ಕಿದಂತೆ ಹರಿಯುತ್ತವೆ. ಆರು ಮೈಲಿ ಹರಿದು ಸಂಗಾತಿ ಬೇಕೆಂಬಂತೆ ವಿಶಾಲ ಬಯಲಲ್ಲಿ ಮತ್ತೆ ಒಂದಾಗುತ್ತವೆ. ಒಂದಾದ ನದಿಯ 'ಮಹಾನದಿ' ಎಂದು ಕರೆದು, ನೂರಾರು ಮೈಲಿ ಹರಿದು ಸಾಗರ ಸೇರುತ್ತದೆ. ಗೊಲ್ಲೇರಿ ಗ್ರಾಮದ ಸುತ್ತ ವರ್ಷೊಂಬತ್ತು ಕಾಲ ಭೂತಾಯಿ ಹಸಿರುಟ್ಟು ನಿತ್ಯ ಮದುವಣಗಿತ್ತಿಯಂತೆ ಕಂಗೊಳಿಸುತ್ತದೆ. ಹಿರೇ ಬೆಟ್ಟದಿಂದ 'ಮಹಾನದಿ'ಯಾಗಿ ಮುಂದೆ ಹರಿವ ನದಿಯ ಎರಡೂ ದಡ ಹತ್ತಾರು ಮೈಲಿ ಹಸಿರೊದ್ದು ಮಲಗಿದೆ. ಆ ಸೌಂದರ್ಯ ಮಲೆನಾಡ ತುಣುಕೊಂದ ತಂದು ಬಯಲಲ್ಲಿ ನೆಟ್ಟಂತಿದ್ದು; ನೋಡಲು ಎರಡು ಕಣ್ಣು ಸಾಲದಾಗಿದೆ. ಕಳೆದೈದು ಮಳೆಗಾಲ ಕೈ ಕೊಟ್ಟು ಗ್ರಾಮಕ್ಕೆ ಎಂದೂ ಇಲ್ಲದ ಬರಗಾಲ ಅಡರುಗಾಲಾಕಿ ಕುಂತಿದೆ. ಹಗಲು ಸುಡುವ ಬಿಸಿಲು ಧಗ ಧಗಿಸುವಂತಿದ್ದು, ರಾತ್ರಿ ಬಿಸಿ ಗಾಳಿ ಬೀಸಿ ರಾಶಿ ರಾಶಿ ನರಬಲಿ ಬೇಕೆಂಬಂತಾಗಿತ್ತು.

ಅಂದು ಬೆಳಗಿನೊತ್ತು ಬೆಂಕಿಯಂತೆ ಉರಿದು ಬೈಗಾಗಿ ಪಡುವಲಕ್ಕಿಳಿಯುತಿತ್ತು. ಗತ್ತು ಗೈರತ್ತಿನಿಂದ ಬಾಳಿ ಬದುಕಿದ ಮನೆ ಮುಂದಿನ ಹಜಾರದ ಜಗತಿ ಮೇಲೆ ಎರಡು ಹಿರಿತಲೆಗಳು ಕುಂತಿದ್ದವು. ಭೂತ, ಭವಿಷ್ಯ, ವರ್ತಮಾನಗಳ ತಾಳೆ ಹಾಕಿ ಹಲ್ಲಿಲ್ಲದ ಹಳೆ ಎತ್ತುಗಳು, ಬಲಿತ ಜೋಳದ ಕಡ್ಡಿ ಕಡಿವಂತೆ ತಮ್ಮ ಅನುಭವ ಮೆಲುಕು ಹಾಕುತ್ತಿದ್ದವು. ಹಿರಿ ತಲೆಗಳ ಆಕಾರವೇ ಅವುಗಳ ಅಂದದ ಇತಿಹಾಸ ಬಿಚ್ಚಿ ಹೇಳುವಂತಿತ್ತು.

ಹಣ್ಣಾದರೂ ಫಳ ಫಳ ಮಿಂಚುತ್ತಿರುವ ಮುಖದ ಕಳೆ; ಹಿರಿತಲೆಗಳು ಮೆಟ್ಟಿ ಮೆರೆದು ಮುಕ್ಕಾದ ಕಥೆ ಹೇಳುತಿದ್ದವು. ಕಾಲನ ತುಳಿತಕ್ಕೆ ಸಿಕ್ಕ ಎರಡೂ ದೇಹಗಳೂ ಕುಗ್ಗಿಹೋಗಿ ಕಣ್ಮುಚ್ಚುವ ದಿನ ಎಣಿಸುತ್ತಿದ್ದವು. ಅಡಿಯಿಂದ ಮುಡಿವರೆಗೆ ತೊಗಲು ಅಸ್ಥಿಗೆ ಸಂಬಂಧ ತಪ್ಪಿ ತಮ್ಮ ಪಾಡಿಗೆ ತಾವಿರಲು ಹವಣಿಸುವಂತಿದ್ದವು. ಎಷ್ಟೇ ಆಗಲಿ ಅಸ್ಥಿಯನ್ನು ಅಪ್ಪಿ ಬೆಳೆದ ಸುಕ್ಕಾದ ತೊಗಲು ದಿಕ್ಕು ತಪ್ಪಿ ದಿಕ್ಕಾಪಾಲಾಗುತ್ತಿದ್ದ ಅದನ್ನು ಒಂದುಗೂಡಿಸುವ ಜವಾಬ್ದಾರಿ ಹೊತ್ತು ಹೆಣಗಾಡುತ್ತ, ಇರುವಷ್ಟು ದಿನ ಒಗ್ಗಟ್ಟಾಗಿರಲು ಒತ್ತಿ ಹೇಳುವಂತಿತ್ತು. ಸೊಂಪಾಗಿದ್ದ ತಲೆಗೂದಲು ನೀರಲ್ಲಿ ಕೊಳೆಸಿದ ಹಸಿ ಕತ್ತಾಳೆ ನಾರ ಹಿಂಜಿ ತಲೆಗೆ ಅಂಟಿಸಿದಂತಿತ್ತು. ಆ ಹಿರಿತಲೆಗಳ ಹೆಸರು ಉಲುಪಯ್ಯ, ಬುಡ್ಡಯ್ಯ ಎಂದು. ಉಲುಪಯ್ಯ ಹರೆಯದಲ್ಲಿ ನಿಂತರೆ ಏಳಡಿಯಿದ್ದು, ಒಂಟಿ ತಲೆಯ ರಾವಳನಂತೆ ಇದ್ದನೆಂದು ಕಾಣುತ್ತದೆ. ಈಗ ಬೆನ್ನು ಬಾಗಿದೆ, ಸೊಂಟ ಸುಸ್ತಾಗಿದೆ. ಬುಡ್ಡಯ್ಯ ಮೋಟು ಮರ ಗಾಳಿಗೆ ಮಿಂಡ ಎಂಬ ಗಾದೆಗೆ ತಕ್ಕಂತಿರುವನು. ಅನುಭವ ಹಂಚಿಕೊಳ್ಳುವ ಹಿರಿತಲೆಗಳ ಮನದಾಳದ ಮಾತು ಕೇಳುವುದು ಬಲು ಚಂದ.

ಉಲುಪಯ್ಯ: ಏನೇ ಆಗ್ಲಿ ಕಾಲ ಕೆಟ್ಹೋತ್ ಕಣಯ್ಯ.

ಬುಡ್ಡಯ್ಯ: ಕಾಲ ಕೆಟ್ಟಿಲ್ಲ ಕಣಯ್ಯ, ಇದ್ದಂಗೆ ಐತೆ. ಕೆಟ್ಟೀರೋರ್ ಜನ.

ಉಲುಪಯ್ಯ: ನೀನೇಳಿದ್ ನಿಜ ಅನ್ನು. ಅಲ್ಲ ಆಡ ಮಕ್ಳ್ ಕೊಳ್ಳಿಗ್ ಸಂಸಾರ ಕಟ್ಟಂತ ಕಾಲ ಬಂತಲ್ಲ. ಆ ಪೆಮ್ಮಳ್ಳಿ ಪುಟ್ಟಯ್ಯಿನ್ ಮಗುನ್ ಮದ್ವೆ ಅಂತೆ, ಕಾಲ ಕೆಟ್ಟಿಲ್ಲ ಅಂತ ಎಂಗೇಳ್ಲಿ. ಅಲ್ಲ, ನೆತ್ತಿ ಆರ್ದಂಗಿರ ಹುಡುಗುರ್ಗೆ ಸಂಸಾರ ಕಟ್ಟುದ್ರೆ ಕಾಪ್ರ ಎಂಗ್ ಮಾಡ್ತವೇಳು. ಎಳೆ ಕರಿಗ್ ಮೂಗ್ದಾರ ಏರ್ಸ್ದಂಗಾಗಿ ನಚ್ಚುರ್ಹೋಗಲ್ವ.

ಬುಡ್ಡಯ್ಯ: ಇನ್ನ ಎಂತೆಂತ ಕಾಲ ಬರ್ತದೊ ಕಾಣ್ದಪ್ಪ, ತುಂಬೆ ಗಿಡಕ್ ಏಣಿ ಹಾಕಿ ಹೂವ್ ಬಿಡ್ಸ ಅಂತ ಮಕ್ಳ್ ಹುಟ್ಟವ ಅನುಸ್ತದೆ.

ಉಲುಪಯ್ಯ: ಅದ್ಕೆ ನಾನೇಳಿದ್ದು ಕಾಲ ಕೆಟ್ಹೋತು ಅಂತ.

ಸಂಭಾಷಣೆ ಕಿವಿಗೊಟ್ಟು ಕೇಳುತ್ತಿದ್ದ ಇಬ್ಬರ ಸುಕ್ಕುಗಟ್ಟಿದ ಹಣೆದೊಗಲು ಅಹುದು ಅಹುದೆಂಬಂತೆ ಮೇಲಕ್ಕೂ ಕೆಳಕ್ಕೂ ಆಡುತ್ತಿತ್ತು. ಕಾಯಕ ಜೀವಿಗಳಾದ ಇಬ್ಬರ ಕೈಗಳು

